ಮಾಡಿಸಿಕೊಟ್ಟಳು. ರಾಜು, ಮಿನಿಟ್ ಕಂಪನಿಗೆ ಸೇರಿ, ಅವರು ನೀಡಿದ ಕಡುನೀಲಿ ಬಣ್ಣದ ಯೂನಿಫಾರ್ಮ್, ಷೂ ಪಡೆದುಕೊಂಡ. ಆದರೆ ಅವನ್ನು ಮಕ್ಕಳೆದುರಿಗೆ ಹಾಕಿಕೊಳ್ಳದೆ, ಮನೆಯಿಂದ ಗಾರ್ಮೆಂಟಿಗೆ ಹೋಗುವಾಗಿನಂತೆಯೇ ಸಾಧಾರಣ ಬಟ್ಟೆ ತೊಟ್ಟು ಹೊರಡುತ್ತಿದ್ದ ಆತ, ಅಲ್ಲೆಲ್ಲೊ ಯೂನಿಫಾರ್ಮ್ ತೊಟ್ಟು ನಡುರಾತ್ರಿಯವರೆಗೂ ಕೆಲಸ ಮಾಡಿ, ಅಲ್ಲಿಯೇ ಬಟ್ಟೆ ಬದಲಿಸಿಕೊಂಡು ಮನೆಗೆ ಬರುತ್ತಿದ್ದ. ಮಗಳಿಗೆ ನಾನು ಸೂಪರ್‌ವೈಸರ್ ಅಲ್ಲ; ಡೆಲಿವರಿ ಬಾಯ್ ಎಂದು ಗೊತ್ತಾದರೆ ಅವಳ ಮನಸ್ಸಿಗೆ ನೋವಾಗುತ್ತದೆ ಎಂಬ ಭಯ ಅವನದು. ಉಮಾ ಅಂಥದ್ದಕ್ಕೆಲ್ಲ ಭಯಪಡಬಾರದೆಂದು, ಯಾವ ಕೆಲಸದ ಬಗ್ಗೆಯೂ ಕೀಳರಿಮೆ ಬೇಡ ಎಂದರೂ, ಅವನ ಸಮಾಧಾನಕ್ಕಾಗಿ ಮಕ್ಕಳ ಮುಂದೆ, ಅಪ್ಪನ ಕೆಲಸದ ಸಮಯ ಬದಲಾಗಿದೆ ಎಂದಷ್ಟೇ ಹೇಳಿ ಸುಮ್ಮನಾಗಿಸಿದ್ದಳು. ಏಕೆಂದರೆ, ಅಪ್ಪ ರಾತ್ರಿ ಲೇಟಾಗಿ ಬರುವುದು, ಯಾವ ರಜಾದಿನವೂ ಮನೆಯಲ್ಲಿರದೆ ಕೆಲಸಕ್ಕೆ ಹೋಗುವುದರ ಬಗ್ಗೆ ಮಗಳು ಅಮ್ಮನನ್ನು ಆಗಾಗ ಕೇಳುತ್ತಿದ್ದಳು. ಊರಿನಲ್ಲಿ ಅಪ್ಪಅಮ್ಮ ಸ್ವಲ್ಪ ಮೆತ್ತಗಾಗಿದ್ದರೂ, ಸೊಸೆಯನ್ನು ಊರಿಗೆ ಕರೆದುಕೊಂಡು ಬಾ ಎಂದು ಹೇಳುವಷ್ಟು ಬದಲಾಗಿರಲಿಲ್ಲ. ಹಬ್ಬ ಹರಿದಿನಗಳಲ್ಲಿ, ಮಕ್ಕಳನ್ನು ಕರೆದುಕೊಂಡು ಹೋಗಿ ಬನ್ನಿ ಎಂದು ಉಮಾ ಹೊರಡಿಸುತ್ತಿದ್ದಳು. ತಾನು ಮಾಡಿಕೊಟ್ಟ ತಿಂಡಿ ತಿನ್ನುತ್ತಾರೋ ಇಲ್ಲವೋ ಎಂದು, ಎಲ್ಲವನ್ನೂ ಅಂಗಡಿಯಿಂದಲೇ ತೆಗೆದುಕೊಂಡು ಹೋಗಿ ಎನ್ನುತ್ತಿದ್ದಳು. ಹದಿನಾರು ವರ್ಷದ ಹಿಂದೆ ನಾವು ಮಾಡಿದ್ದು ಅವರ ದೃಷ್ಟಿಯಲ್ಲಿ ತಪ್ಪಾಗಿರುವಾಗ, ಕಾಲ ಬರುವವರೆಗೂ ಕಾಯಬೇಕಾದ್ದು ನಮ್ಮ ಕರ್ತವ್ಯ ಎಂದು ಹೇಳಿದ್ದ ಉಮಾಳ ಮಾತು ರಾಜುವಿಗೂ ಸರಿಯೆನ್ನಿಸಿತ್ತು. ಆಗಾಗ, ಉಮಾಳೂ ಒಳ್ಳೆಯವಳು. ಉಟ್ಟ ಬಟ್ಟೆಯಲ್ಲಿ ಊರು ಬಿಟ್ಟು ಬಂದರೂ ನನ್ನಂತಹವನನ್ನು ಕುಡಿತ ಬಿಡಿಸಿ, ಬದುಕು ಕಟ್ಟಿಕೊಂಡಿದ್ದಾಳೆ. ಮೈಗಂಟಿದ ಕಲೆಗಿಂತ ಮನಸ್ಸಿಗಂಟಿದ ಕೊಳೆ ಬಹಳ ತೊಂದರೆ ಕೊಡುತ್ತದೆ ಎನ್ನಿಸುತ್ತಿತ್ತು ರಾಜುವಿಗೆ. ರಾತ್ರಿ ಎಂಟರ ಹೊತ್ತಿಗೆ, ಮ್ಯಾನೇಜರ್‌ಗೆ ಹೇಳಿ, ಬಟ್ಟೆ ಬದಲಿಸಿ, ರಾಜು ಮನೆಗೆ ಹೊರಟ. ಮಕ್ಕಳು ಹೋಮ್‌ವರ್ಕ್ ಮುಗಿಸಿ ಕಾಯುತ್ತಿದ್ದರು. ಮನೆಯಲ್ಲಿ ಮೂರ್ನಾಲ್ಕು ಮೇಣದ ಬತ್ತಿಗಳನ್ನು ಸಿದ್ಧಪಡಿಸಿ ಇಡಲಾಗಿತ್ತು. ಇದೇನಿದು? ಎಂದು ಆಶ್ಚರ್ಯಕ್ಕೆ ಬಿದ್ದ ಅಪ್ಪನಿಗೆ ಮಗಳು, ಇವತ್ತು ನಮ್ಮ ಮನೆಯಲ್ಲಿ ಕ್ಯಾಂಡಲ್ ಲೈಟ್ ಡಿನ್ನರ್ ಎಂದಳು. ರಾಜು ಮಕ್ಕಳನ್ನೊಮ್ಮೆ ಮುದ್ದಿಸಿ, ಈಗ ಹೇಳಿ? ಏನು ಆರ್ಡರ್ ಮಾಡುವುದು ಎಂದು ಕುಳಿತ. ಮಗಳು ನಿರ್ಧರಿಸಿಬಿಟ್ಟಿದ್ದಳು, ಎಗ್‌ರೈಸ್ ಎಂದು. ರಾಜು ಸಂತೋಷದಿಂದ, ತಮ್ಮಿಂದ ಹೆಚ್ಚು ಜನ ತರಿಸಿಕೊಳ್ಳುತ್ತಿದ್ದ ಪ್ರಸಿದ್ಧ ಹೋಟೆಲ್ಲೊಂದರ ಎಗ್‌ರೈಸ್, ಜೊತೆಗೆ ಕಬಾಬನ್ನೂ ಆರ್ಡರ್ ಮಾಡಿದಾಗ, ಮಗನ ಮುಖ ಊರಗಲವಾಗಿತ್ತು. ಅದನು ಗಮನಿಸಿದ ಉಮಾ, ಗಂಡನಿಗೂ ತೋರಿಸಿ




ಮುಗಳ್ನಕ್ಕಳು. ಅರ್ಧ ಗಂಟೆಯಲ್ಲಿಯೇ ಊಟ ಬಂತು. ರಾಜು ತೊಡುತ್ತಿದ್ದಂಥದ್ದೇ ಯೂನಿಫಾರ್ಮ್ ತೊಟ್ಟಿದ್ದ ಹುಡುಗ. ರಾಜು, ಆ ಹುಡಗನನ್ನು ಬ್ರೊ ಎಂದು ಸಂಬೋಧಿಸಿ, ಕುಶಲವಾಗಿ ಮಾತನಾಡಿಸಿ, ಪಾರ್ಸೆಲ್ ತೆಗೆದುಕೊಂಡು, ಇಪ್ಪತ್ತು ರೂಪಾಯಿ ಟಿಪ್ಸನ್ನೂ ಕೊಟ್ಟಿದ್ದ. ಹೆಂಡತಿ ಮಕ್ಕಳೊಂದಿಗೆ ಮಾತನಾಡುತ್ತಾ, ಊಟ ಮುಗಿಸಿದಾಗ, ರಾಜುವಿನ ಮನಸ್ಸು ತುಂಬಿ ಬಂದಿತ್ತು. ಮಕ್ಕಳು, ಉಮಾ ಖುಷಿಯಾಗಿದ್ದರು. ಮಲಗಿದಾಗ, ನಾನೇಕೆ ಮಗಳ ಮುಂದೆ, ನನ್ನ ಕೆಲಸದ ಬಗ್ಗೆ ಮುಚ್ಚಿಟ್ಟಿದ್ದೇನೆ? ಊಟ ತಂದುಕೊಡುವ ಕೆಲಸ ಕೀಳೆ? ತುಂಡು ಯೋಚನೆಗಳು ದಾಳಿಯಿಟ್ಟರೂ, ಏನೊಂದೂ ನಿರ್ಧಾರಕ್ಕೆ ಬರಲಾಗದೆ, ಒದ್ದಾಡಿದ್ದ. ಒಂದು ದಿನ ಉಮಾ ಬರುವಷ್ಟರಲ್ಲಿ, ಎಂದಿನಂತೆ ಸಂಜೆ ಸ್ಕೂಲಿನಿಂದ ಬಂದಿದ್ದ ಮಕ್ಕಳು ಟೀವಿ ನೋಡುತ್ತಾ ಕುಳಿತಿದ್ದರು. ಉಮಾ ಒಳ ಬರುತ್ತಿದ್ದಂತೆಯೇ ಮಗಳು ಅಮ್ಮಾ, ಅಪ್ಪ ಸ್ಕೂಟರ್ ಮಾರಿಬಿಟ್ಟರಾ? ಎಂದಳು. ಉಮಾಳಿಗೆ ಆಶ್ಚರ್ಯ! ನಮ್ಮ ಸ್ಕೂಟರನ್ನು ಯಾರೋ ಮಿನಿಟ್ ಫುಡ್ ಡೆಲಿವರಿಯವರು ಓಡಿಸಿಕೊಂಡು ಹೋಗುತ್ತಿದ್ದರು. ಸ್ಕೂಲಿನಿಂದ ಬರುವಾಗ ನಾನು ನೋಡಿ, ತಮ್ಮನಿಗೂ ತೋರಿಸಿದೆ. ಯಾಕಮ್ಮ ಮಾರಿಬಿಟ್ಟರಿ? ಎಂದಳು. ಉಮಾಳಿಗೆ ಎಲ್ಲವೂ ಅರ್ಥವಾಗಿತ್ತು. ಆದರೂ ಸ್ಕೂಟರ್ ಏಕೆ ಮಾರುತ್ತಾರೆ ಮಗಳೆ? ನೀನು ಬೇರೆ ಯಾರದೋ ನೋಡಿರಬೇಕು ಎಂದಳು. ಇಲ್ಲಮ್ಮ, ಅದರ ಹಿಂಭಾಗ ನಮ್ಮಿಬ್ಬರ ಹೆಸರಿತ್ತು. ನನಗೆ ನಮ್ಮ ಸ್ಕೂಟರ್ ನಂಬರ್ ಕೂಡಾ ನೆನಪಿದೆ. ಹೇಳಲಾ ಎಂದಳು. ಸ್ಕೂಟರ್ ಮಾರಿದ್ದಾರೆ ಎಂಬುದನ್ನು ಬಿಟ್ಟು, ಮಗಳು ಹೇಳುತ್ತಿರುವುದರಲ್ಲಿ ಯಾವುದೂ ಸುಳ್ಳಿರಲಿಲ್ಲ. ಅಪ್ಪ ಬರಲಿ, ಅವರನ್ನೇ ಕೇಳೋಣ. ಈಗ ಹೋಮ್‌ವರ್ಕ್ ಮಾಡಿಕೊಳ್ಳಿ ಎಂದು ಒಳಗೆ ಹೋದಳು. ದಿನಾ ರಾತ್ರಿ ಅಪ್ಪ ಬರುವಷ್ಟರಲ್ಲಿ ಮಲಗುತ್ತಿದ್ದ ಮಗಳು, ಇಂದು ಮಲಗದೇ ಕಾಯುತ್ತಾ ಕುಳಿತು ಬಿಟ್ಟಿದ್ದಳು. ಮಗ, ಅಮ್ಮನ ತೊಡೆಯ ಮೇಲೆ ನಿದ್ದೆಗೆ ಜಾರಿದ್ದ. ಸ್ಕೂಟರ್ ಮಾರಿಲ್ಲ ಎಂಬುದು ಖಚಿತವಿದ್ದುದರಿಂದ ಅದರ ಬಗ್ಗೆ ಉಮಾ ಚಿಂತಿಸುತ್ತಿರಲಿಲ್ಲ. ಮಗಳನ್ನು ರಾಜು ಹೇಗೆ ಎದುರಿಸುತ್ತಾನೆ ಎಂಬುದಷ್ಟೇ ಅವಳ ಚಿಂತೆಯಾಗಿತ್ತು. ರಾತ್ರಿ, ಅಪ್ಪ ಸ್ಕೂಟರಿನೊಂದಿಗೇ ಹಿಂತಿರುಗಿದ್ದನ್ನು ನೋಡಿ ಮಗಳಿಗೆ ಆಶ್ಚರ್ಯ! ಮಗಳು ಎಚ್ಚರವಾಗಿರುವುದನ್ನು ನೋಡಿ ಅಪ್ಪನಿಗೆ ಆಶ್ಚರ್ಯ! ಏಕೆ ಮಗಳೆ ಮಲಗಿಲ್ಲ? ಎಂದು ಕೇಳುತ್ತಿದ್ದರೂ, ರಾಜು ಉಮಾಳ ಮುಖ ನೋಡುತ್ತಿದ್ದ. ಅಷ್ಟರಲ್ಲಿ ಮಗಳು ಅಪ್ಪ ಸಂಜೆ ನಮ್ಮ ಸ್ಕೂಟರ್ ಬೇರೆಯವರಿಗೆ ಕೊಟ್ಟಿದ್ರಾ? ಎಂದಳು. ಇಲ್ಲವಲ್ಲಾ ಎಂದನು ರಾಜು. ಇಲ್ಲ, ನಾನು ನೋಡಿದೆ. ಯಾರೋ ಮಿನಿಟ್ ಫುಡ್ ಡೆಲಿವರಿಯವರು ಓಡಿಸುತ್ತಿದ್ದರು ಎಂದು ಹಟ ಹಿಡಿದವಳಂತೆ ಕೇಳಿದಳು. ಇನ್ನು ತಡೆಯದಾದ ರಾಜು, ಮಗಳನ್ನು ಅಪ್ಪಿಕೊಂಡು, ಉಮಾಳ ಮುಖ ನೋಡಿದ. ಉಮಾ ಮಗಳನ್ನು ತನ್ನೆಡೆಗೆ ತಿರುಗಿಸಿ, ಮಗಳೆ, ಅಪ್ಪ ನಿನ್ನಿಂದ ಒಂದು ವಿಷಯ ಮುಚ್ಚಿಟ್ಟಿದ್ದರು. ಅವರ ಗಾರ್ಮೆಂಟ್ ಕೆಲಸ ಹೋಗಿತ್ತು. ನೀನು ಪುಟ್ಟವಳಿದ್ದಾಗಲಿಂದಲೂ ಮುದ್ದುಮುದ್ದಾಗಿ ಗಾರ್ಮೆಂಟ್ ಸೂಪರ್‌ವೈಸರ್ ಎನ್ನುತ್ತಿದ್ದೆಯಲ್ಲಾ ಅದನ್ನು ಕೇಳಲು ಅವರಿಗೆ ಇಷ್ಟ. ಅದಕ್ಕೆ, ಆ ಕೆಲಸ ಬಿಟ್ಟು, ಫುಡ್ ಡೆಲಿವರಿ ಕೆಲಸ ಮಾಡುತ್ತಿರುವುದನ್ನು ಹೇಳಿರಲಿಲ್ಲ, ಅಷ್ಟೆ ಎಂದಳು.

ಅಷ್ಟೇನಾ? ಅದನ್ಯಾಕೆ ಮುಚ್ಚಿಡಬೇಕಿತ್ತು? ನನಗೆ ನೀವು ಸುಳ್ಳು ಹೇಳುತ್ತಿದ್ದೀರಾ ಅನ್ನಿಸುತ್ತೆ ಎಂದಳು. ಆಗ ರಾಜು ನಿರ್ಧಾರಕ್ಕೆ ಬಂದವನಂತೆ ಮಗಳೆ ನನ್ನನ್ನು ಕ್ಷಮಿಸಿಬಿಡು. ನಾನು ಡೆಲಿವರಿ ಕೆಲಸ ಮಾಡುತ್ತಿದ್ದೇನೆ ಎಂದರೆ ನಿನಗೆ ಬೇಜಾರಾಗಬಹುದು ಅಂದುಕೊಂಡು, ಅಮ್ಮ ಬೇಡವೆಂದರೂ ನಾನೇ ವಿಷಯ ಮುಚ್ಚಿಟ್ಟಿದ್ದೆ ಎಂದನು.

ಒಂದರೆಕ್ಷಣ, ಮಗಳು ಅಪ್ಪನ ಕೆನ್ನೆ ಹಿಡಿದು, ಅಪ್ಪ. ಡೆಲಿವರಿ ಕೆಲಸ ಮಾಡೋದು ತಪ್ಪಾ? ಎಂದಳು. ಇಲ್ಲ, ಮಗಳೆ ಎಂದನು ರಾಜು. ಮತ್ತೆ ಅದನ್ಯಾಕೆ ಮುಚ್ಚಿಡಬೇಕು. ಡೆಲಿವರಿ ಕೆಲಸ ಮಾಡೋದು ಕೂಡಾ ಘನತೆಯ ಕೆಲಸವೆ. ಯಾವ ಕೆಲಸವೂ ಕೀಳಲ್ಲ. ಮಿಸ್ ಕೊಟ್ಟಿದ್ದ ಪುಸ್ತಕದಲ್ಲಿ ಡಿಗ್ನಿಟಿ ಆಫ್ ಲೇಬರ್ ಬಗ್ಗೆ ನಾನು ಓದಿದ್ದೇನೆ ಎಂದಳು. ರಾಜು ಉಮಾ ಇಬ್ಬರೂ ಸಮಾಧಾನದ ನಿಟ್ಟುಸಿರು ಬಿಟ್ಟು ಮುಖ ಮುಖ ನೋಡಿಕೊಳ್ಳುತ್ತಿದ್ದಾಗ ಮಗಳು, ನೀನು ಡೆಲಿವರಿ ಬಾಯ್ ಆಗಿದ್ದು ನನಗಂತೂ ತುಂಬಾ ಖುಷಿಯಾಯಿತು. ನೋಡು ನೀನೀಗ ವಯಸ್ಸಾಗಿರೊ ಅಪ್ಪ ಅಲ್ಲ! ಬಾಯ್! ಬಾಯ್ ಅಂದರೆ ಹುಡುಗ. ಹುಡುಗ ಆಗಿದ್ದೀಯಾ ನೀನು! ಎಂದು ನಕ್ಕಳು. ಆಕಾಶದಿಂದ ಕಿಟಕಿಯಲ್ಲಿ ಇಣುಕುತ್ತಿದ್ದ ಚಂದ್ರ ಬೆಳದಿಂಗಳ ನಗುತ್ತಿದ್ದ!

ಪ್ರತಿಕ್ರಿಯಿಸಿ: feedback@sudha.co.in